**ಪತ್ರಿಕಾ ಪ್ರಕಟಣೆ**

**ವಿಜಯಪುರ**
**ದಿನಾಂಕ: 24.05.2021.**

**1] ಎ.ಪಿ.ಎಂ.ಸಿ ಪೊಲೀಸ ಠಾಣೆ ಗುನ್ನಾ. ನಂ: 41/2021 ಕಲಂ: 188, 269 ಐಪಿಸಿ & ಕಲಂ–15(ಎ), 32(3) ಕೆ.ಇ.ಆ್ಯಕ್ಟ**

ದಿನಾಂಕ: 23.05.2021 ರಂದು 18:45 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ರಾಜು ಶಿವಪ್ಪ ಹರಿಜನ, ಸಾ॥ ಲೇಪ್ರಸಿ ಕಾಲನಿ ರಂಗೀನ ಮಸೀದಿ ಹತ್ತಿರ ವಿಜಯಪುರ ಈತನು ಕೋರೋನಾ ವೈರಸ್/ಕೋವಿಡ್–19 ವೈರಸ್ ಹರಡದಂತೆ ಮಾನ್ಯ ಕರ್ನಾಟಕ ಸರಕಾರದ ಆದೇಶವನ್ನು ಜಾರಿಗೊಳಿಸುವ ದೃಷ್ಠಿಯಿಂದ ಸಿಬ್ಬಂದಿ ಜನರೊಂದಿಗೆ ಪೆಟ್ರೋಲಿಂಗ್ ಮಾಡುತ್ತಾ ಶಾಪೇಟಿ ಕ್ರಾಸ್ ಹತ್ತಿರ ಹೋದಾಗ ತಮಗೆ ಬಾತ್ಮಿ ಬಂದಿದ್ದರಲ್ಲಿ ವಿಜಯಪುರ ಶಹರದ ಲೆಪ್ರಸಿ ಕಾಲನಿಯ ರಾಜು ತಂದೆ ಶಿವಪ್ಪ ಹರಿಜನ ಇವನ ಮನೆಯ ಮುಂದೆ ಕಟ್ಟೆಯ ಮೇಲೆ ಸರಕಾರದಿಂದ ಯಾವುದೇ ಅನುಮತಿ ಇಲ್ಲದೆ ಹಾಗೂ ಮಾಸ್ಕನ್ನು ಹಾಕಿಕೊಳ್ಳದೆ ಮತ್ತು ಯಾವುದೇ ಸಾಮಾಜಿಕ ಅಂತರ ಕಾಪಾಡಿಕೊಳ್ಳಬೇಕು ಹಾಗೂ ಸದರಿ ಕೋರೋನ ವೈರಸ್ ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ ಅದರ ಬಗ್ಗೆ ಮುಂಜಾಗ್ರತೆ ವಹಿಸಬೇಕು, ಮತ್ತು ಬೆಳಿಗ್ಗೆ 10.00 ಗಂಟೆಯ ನಂತರ ಸರಾಯಿ ಮಾರಾಟ ನಿಷೇಧ ಅಂತಾ ಮಾನ್ಯ ಸರ್ಕಾರದಿಂದ ಆದೇಶ ಇದ್ದರೂ ಸರ್ಕಾರದ ಆದೇಶವನ್ನು ಉಲ್ಲಂಘನೆ ಮಾಡಿ ಸಾರ್ವಜನಿಕರಿಗೆ ಸಾರಾಯಿ ಕುಡಿಯಲು ಅವಕಾಶ ನೀಡಿದ್ದಲ್ಲದೇ ಕುಡಿಯಲು ಕುಳಿತ ಜನರಿಗೆ ತಿಂಡಿ ತಿನಿಸು ಪೂರೈಸುತ್ತಿದ್ದು ಸದರಿಯವನಿಗೆ ಪಂಚರ ಸಮಕ್ಷಮ ರೇಡ್ ಮಾಡಿ ಹಿಡಿದು ಅವನಿಂದ 1) ಓಲ್ಡ್ ಟವರ್ನ್ ವಿಸ್ಕಿ 180 ಎಮ್. ಎಲ್ ಅಂತಾ ಲೇಬಲ್ ಇದ್ದ ಖಾಲಿ ಟೆಟ್ರಾ ಪಾಕೀಟುಗಳು –10, 2) ಸರಾಯಿ ಕುಡಿಯಲು ಬಳಸಿದ ಯುಜ್ & ಥ್ರೋ ಪ್ಲಾಸ್ಟಿಕ್ ಗ್ಲಾಸಗಳು–08, 3) ಕುರಕುರೆ ಪಾಕೇಟ್‌ಗಳು 06 ಇವುಗಳ ಸಮೇತ ಸಿಕ್ಕ ಅಪರಾಧ. ಈ ಬಗ್ಗೆ ಸ:ತ: ಸೊಮೇಶ ಗೆಜ್ಜಿ. ಪಿಎಸ್ಐ(ಕಾ&ಸು) ಎ.ಪಿ.ಎಂ.ಸಿ ಪೊಲೀಸ್ ಠಾಣೆ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 23.05.2021 ರಂದು ಎ.ಪಿ.ಎಂ.ಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಗೋಲಗುಮ್ಮಜ ಪೊಲಿಸ್ ಠಾಣೆ ಗುನ್ನಾ. ನಂ: 53/2021 ಕಲಂ: 448, 341, 384, 307, 504, 506 ರೆ/ವು 34 ಐಪಿಸಿ**

ದಿನಾಂಕ: 16.05.2021 ರಂದು 14.30 ಗಂಟೆಯಿಂದ 14.55 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1) ಮೊಹ್ಮದಜುಬೇರ್ ಉಬೇದುಲ್ಲಾ ಬೂದಿಹಾಳ, ನವರಸಪೂರ ಬಡಾವಣೆ ವಿಜಯಪುರ 2] ಸಲ್ಮಾನ ರಾಂಪೂರೆ ಸಾ: ವಿಜಯಪುರ ಈತನು ಪಿರ್ಯಾದುದಾರರಿಗೆ ಪರಿಚಯವಿದ್ದ ನವರಸಪೂರ ಬಡಾವಣೆಯ ನಿವಾಸಿ ಮೊಹ್ಮದಜುಬೇರ್ ತಂ: ಉಬೇದುಲ್ಲಾ ಬೂದಿಹಾಳ ಈತನು ಪಿರ್ಯಾದಿಗೆ ಹಣ ಕೊಡುವಂತೆ ಪೀಡಿಸುತ್ತಿದ್ದು, ಅದಕ್ಕೆ ಪಿರ್ಯಾದಿಯು ಹಣ ಕೊಡಲಾರದ ಸಿಟ್ಟನ್ನು ಹಿಡಿದು, ದಿನಾಂಕ: 16.05.2021 ರಂದು ಮದ್ಯಾಹ್ನ 2.30 ಗಂಟೆಯ ಸುಮಾರಿಗೆ ಪಿರ್ಯಾದುದಾರನು ತಮ್ಮ ಮನೆಯಲ್ಲಿ ಇರುವಾಗ ಆರೋಪಿತರಾದ ಮೊಹ್ಮದಜುಬೇರ್ ಹಾಗೂ ಸಲ್ಮಾನ ರಾಂಪೂರೆ ಇಬ್ಬರೂ ಕೂಡಿ ಪಿರ್ಯಾದಿಯ ಮನೆಯನ್ನು ಅತಿಕ್ರಮ ಪ್ರವೇಶ ಮಾಡಿ, ಹಲಕಟ್ ಬೈದು, ಕೊಲೆ ಮಾಡುವ ಉದ್ದೇಶದಿಂದ ಕುತ್ತಿಗೆ ಹಿಚುಕಿ, ಕುತ್ತಿಗೆಗೆ ಸತ್ತೂರವನ್ನು ಹಿಡಿದು ಸಾಯಿಸುವುದಾಗಿ ಭಯಪಡಿಸಿ ಅಪ್ರಮಾಣಿಕವಾಗಿ ಪಿರ್ಯಾದುದಾರರ ಹೆಸರಿನಲ್ಲಿದ್ದ ಬ್ಯಾಂಕ್ ಚೆಕ್‌ಗೆ 20 ಲಕ್ಷ ಅಂತಾ ಬರೆಯಿಸಿ, ಸಹಿ ಪಡೆದು, ಈ ಬಗ್ಗೆ ಯಾರಿಗಾದರೂ ಹೇಳಿದರೆ ನಿಮಗ ಕಲಾಸ ಮಾಡುತ್ತೇವೆ ಅಂತಾ ಜೀವ ಬೆದರಿಕೆ ಹಾಕಿದ ಬಗ್ಗೆ ಸದರ ಪಿರ್ಯಾದಿಯಲ್ಲಿ ನಮೂದು ಅದೆ. ಈ ಬಗ್ಗೆ ಅಬ್ದುಲ್‌ಖಾದರ @ ಶಾನವಾಜ್ ತಂ: ಬಂದೇನವಾಜ್ ಚಟ್ಟರಕಿ, ಸಾ: ನಾಗರಬಾವಡಿ ಗಾರ್ಡನ್, ಖಾಜಿ ಪ್ಲಾಟ್, ಬಡಿಕಮಾನ ರಸ್ತೆ ವಿಜಯಪುರ. ರವರು ಫಿರ್ಯಾದಿ ಕೊಟ್ಟ ಮೇರೆಗೆ, ದಿನಾಂಕ: 23.05.2021 ರಂದು ಗೋಲಗುಮ್ಮಜ ಪೊಲೀಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ನಿಡಗುಂದಿ ಪೊಲಿಸ್ ಠಾಣೆ ಗುನ್ನಾ. ನಂ: 54/2021 ಕಲಂ: 272, 273 ಐಪಿಸಿ & 20 (2), 24 ಕೊಪ್ಟಾ ಆ್ಯಕ್ಟ**

ದಿನಾಂಕ: 23.05.2021 ರಂದು 13:15 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಚನಮಲ್ಲಪ್ಪ ತಂ ಬಸಪ್ಪ ಮಾಶೆಟ್ಟಿ ಸಾ: ವಂದಾಲ ತಾ: ನಿಡಗುಂದಿ ಈತನು ತನ್ನ ಪಾಯಿದೆಗೋಸ್ಕರ ಸರಕಾರದಿಂದ ಯಾವುದೇ ಲೈಸನ್ಸ ವ ಪರ್ಮಿಟ ಇಲ್ಲದೆ, ಮಾನವನ ಆರೋಗ್ಯಕ್ಕೆ ಹಾನಿ ಆಗುವಂತಹ ಪದಾರ್ಥವೆಂದು ತಿಳಿದು, ತಿಳಿದು ಅಡಿಕೆ ಚೂರು, ತಂಬಾಕು, ಸುಣ್ಣದ ನೀರಿನಲ್ಲಿ ಬೆರಸಿ ತಿಕ್ಕಿ "ಮಾವಾ" ಅಂಬುವ ಪದಾರ್ಥ ತಯಾರಿಸುವಾಗ ಸಿಕ್ಕ ಅಪರಾಧ. ಜಪ್ತಾದ ಮಾಲಿನ ವಿವರ. ಈ ಬಗ್ಗೆ ಸ:ತ: ಚಂದ್ರಶೇಖರ ಹೆರಕಲ್ ಪಿ.ಎಸ್.ಐ (ಕಾ&ಸು) ನಿಡಗುಂದಿ ಪಿ.ಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ, ದಿನಾಂಕ: 23.05.2021 ರಂದು ನಿಡಗುಂದಿ ಪೊಲೀಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.